ಓ.ಎಸ್.ನಂ.218/2022
ಪಿ.ಡಬ್ಲ್ಯೂ-1

ದಿನಾಂಕಃ16-01-2025 ರಂದು ಪಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಃ **1, 4** ರಿಂದ **6** ನೇ ಪ್ರತಿವಾದಿ ಪರ ಶ್ರೀ**.**ಡಿ**.**ಡಿ**.**ಜೆ ವಕೀಲರಿಂದಃ</u>

1. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಿದ್ಧಪಡಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಉಳಿದ ವಾದಿಯರು ತಮ್ಮ ಪರವಾಗಿ ಸಾಕ್ಷ್ಯ ನುಡಿಯಲು ಅಧಿಕಾರ ಬರೆದುಕೊಟ್ಟಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ಅಜ್ಜನಿಂದ ನನ್ನ ತಂದೆಗೆ ಬಂದಿರುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಪಡಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ತಂದೆಗೆ ಆತನ ಹಿರಿಯರಿಂದ ಬಂದಿರುತ್ತವೆ. ದಾವಾ ಸ್ವತ್ತುಗಳ ನಂಬರಗಳನ್ನು ನಾನು ಹೇಳಬಲ್ಲೆ. ಅವುಗಳ ನಂಬರಗಳು 514, 515, 517 ಉಳಿದ ಎರಡು ಆಸ್ತಿಗಳ ನಂಬರ ನನಗೆ ನೆನಪಿಲ್ಲ.

2. ನನ್ನ ಅಜ್ಜ ಬಸಪ್ಪ ಇವರಿಗೆ ನಾಲ್ಕು ಜನ ಮಕ್ಕಳು ಇದ್ದು ಅವರ ಹೆಸರುಗಳು ಚೆನ್ನಪ್ಪ, ರಾಮಪ್ಪ, ಬಾಗವ್ವ ಮತ್ತು ಲಕ್ಷ್ಮಿಬಾಯಿ ಇರುತ್ತವೆ. ಶೋಭಾ ಎನ್ನುವವರು ನನ್ನ ತಂಗಿ ಇರುತ್ತಾರೆ. ಸದರಿಯವರನ್ನು ಮದುವೆ ಮಾಡಿಕೊಟ್ಟಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಾಟಿ ಮಾಡಿಲ್ಲ. ನನ್ನ ತಮ್ಮ ವಿಠಲ ಇವರು ಮರಣ ಹೊಂದಿರುತ್ತಾರೆ. ಆತನಿಗೆ ಮಕ್ಕಳು ಇರಲಿಲ್ಲ. ಆತನ ಹೆಂಡತಿಯಾದ ರೇಣುಕಾ ಇವರು ಸಹ ಮರಣ ಹೊಂದಿರುತ್ತಾರೆ. ಸದರಿ ರೇಣುಕಾರವರು ತೇರದಾಳ ಗ್ರಾಮದಲ್ಲಿ ಈಗಲೂ ವಾಸ ಮಾಡುತ್ತಿದ್ದಾರೆ ಎಂದು ವಕೀಲರು ಸೂಚಿಸಿದಾಗ ಸಾಕ್ಷಿಯು ಆಕೆ ಮರಣ ಹೊಂದಿರುತ್ತಾಳೆ ಎಂದು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರೇಣುಕಾರವರು ಮರಣ ಹೊಂದಿರುವ ಬಗ್ಗೆ ತೇರದಾಳ ಗ್ರಾಮದವರು ನನಗೆ ತಿಳಿಸಿರುತ್ತಾರೆ, ನನಗೆ ತಿಳಿಸಿದವರ ಹೆಸರು ನನಗೆ ನೆನಪಿಲ್ಲ. ಸದರಿ ರೇಣುಕಾರವರು ಮರಣ ಹೊಂದಿರುತ್ತಾರೆ ಎಂದು ತೋರಿಸಲು ನಾನು ಮರಣ ಪ್ರಮಾಣ ಪತ್ರ ಹಾಜರ ಪಡಿಸಿಲ್ಲ. ವಾದ ಪತ್ರದೊಂದಿಗೆ ಲಗತ್ತಿಸಿದ ವಂಶಾವಳಿಯಲ್ಲಿ ಸದರಿ ರೇಣುಕಾರವರ ಬಗ್ಗೆ ನಮೂದು ಮಾಡಿಲ್ಲಾ ಎಂದರೆ ಸರಿ.

3. ನನ್ನ ತಂದೆಯ ತಮ್ಮನಾದ ರಾಮಪ್ಪರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ರಾಮಪ್ಪರವರಿಗೆ ಮಕ್ಕಳು ಇದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಸಿಟಿಎಸ್ ನಂ. 514, 514, ಮತ್ತು 4660 ನನ್ನ ಅಜ್ಜನ ಆಸ್ತಿಗಳು ಅಲ್ಲಾ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಿಟಿಎಸ್ ನಂ. 517 ಮಾತ್ರ ನಮ್ಮ ತಂದೆಯ ಆಸ್ತಿ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಿಟಿಎಸ್ ನಂ. 514, 514, ಮತ್ತು 4660 ಇವುಗಳು ರಾಮಪ್ಪ ತಂ.ನೆಂದಪ್ಪ ತರತರಿ ಇವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ರಾಮಪ್ಪ ತಂ.ನೆಂದಪ್ಪ ತರತರಿ ಇವರು ನನ್ನ ಅಜ್ಜನ ಸಹೋದರ ಇರುತ್ತಾರೆ.

4. 1972 ರಲ್ಲಿ ನನ್ನ ತಂದೆ ಮತ್ತು ಆತನ ಸಹೋದರ ಸಹೋದರಿಯರು ದಾವಾ ಸ್ವತ್ತು ಸಿಟಿಎಸ್ ನಂ.514, 514, ಮತ್ತು 4660 ಇವುಗಳನ್ನು ಸದರಿ ರಾಮಪ್ಪ ತಂ.ನೆಂದಪ್ಪ ತರತರಿ ಇವರಿಂದ ಪಡೆದು ನಂತರ ತಮ್ಮ ಮಧ್ಯೆ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ದಾವಾ ಸ್ವತ್ತು ಸಿಟಿಎಸ್ ನಂ.514, ಮತ್ತು 515 ಆಸ್ತಿಗಳು ಲಕ್ಷ್ಮಿಬಾಯಿ ಮತ್ತು ರಾಮಪ್ಪ ಇವರ ಪಾಲಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಿಟಿಎಸ್ ನಂ.4660 ಲಕ್ಷ್ಮಿಬಾಯಿ ಮತ್ತು ಚನ್ನಪ್ಪನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಿಟಿಎಸ್ ನಂ.517 ನನ್ನ ತಂದೆ ಮತ್ತು ಆತನ ಸಹೋದರ ಸಹೋದರಿಯರು ಜಂಟಿಯಾಗಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ಮ್ಯುಟೇಶನ ಸಹ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಮಪ್ಪ ಮತ್ತು ಲಕ್ಷ್ಮಿಬಾಯಿ ಇವರು ಮಕ್ಕಳಿಲ್ಲದೆ ಮರಣ ಹೊಂದಿರುವುದಂರಿದ ಅವರ ಪಾಲಿಗೆ ಬಂದಿದ್ದ ದಾವಾ ಸ್ವತ್ತುಗಳನ್ನು ನನ್ನ ತಂದೆ ಮತ್ತು ಭಾಗವ್ವ ಪುನಃ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ದಾವಾ ಸ್ವತ್ತು ಸಿಟಿಎಸ್ ನಂ.514 ಮತ್ತು 515 ಆಸ್ತಿಗಳು ಭಾಗವ್ವ ಇವರ ಹೋಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಿಟಿಎಸ್ ನಂ.517 ನನ್ನ ತಂದೆಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ಮ್ಯುಟೇಶನ ಸಹ ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಸದರಿ ಭಾಗವ್ವ ಸಾಲ ಮಾಡಿ ದಾವಾ ಸ್ವತ್ತುಗಳಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

5. ಸದರಿ ಲಕ್ಷ್ಮಿಬಾಯಿ ಇವರ ಪಾಲಿಗೆ ಬಂದಿದ್ದ ಆಸ್ತಿಗಳನ್ನು ನನ್ನ ತಂದೆ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಪಾಲಿಗೆ ಬಂದಂತಹ ಆಸ್ತಿಗಳ ಕುರಿತಾಗಿ ವಾರಸಾ ಮಾಡಿಕೊಂಡಿರುತ್ತೆವೆ ಎಂದರೆ ಸರಿಯಲ್ಲ. ಸದರಿ ಭಾಗವ್ವ ಇವರ ಪಾಲಿಗೆ ಬಂದಂತಹ ಆಸ್ತಿಗಳ ಕುರಿತಾಗಿ ಅವರು 1 ನೇ ಪ್ರತಿವಾದಿ ಇವರ ಹೆಸರಿಗೆ ಮೃತ್ಯು ಪತ್ರ ಬರೆದಿರುತ್ತಾರೆ ಎಂದರೆ

ಸರಿಯಲ್ಲ. ಸದರಿ ಮೃತ್ಯು ಪತ್ರದ ಆಧಾರದ ಮೇಲೆ 1ನೇ ಪ್ರತಿವಾದಿ ದಾವಾ ಸ್ವತ್ತು ಸಿಟಿಎಸ್ ನಂ.514 , 515 ಮತ್ತು 517 ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಕುರಿತಾದ ಮ್ಯುಟೇಶನಗಳನ್ನು ನಾನು ಸೂಕ್ತ ಪ್ರಾಧಿಕಾರದ ಮುಂದೆ ಪ್ರಶ್ನೀಸಿರುವುದಿಲ್ಲ ಎಂದರೆ ಸರಿ.

6. ದಾವಾ ಸ್ವತ್ತು ಸಿ.ಎಂಸಿ ನಂ.48 ಇದನ್ನು ಸರ್ಕಾರವು ಭಾಗವ್ವ ಇವರಿಗೆ ಮಂಜೂರು ಮಾಡಿರುತ್ತದೆ ಎಂದರೆ ಸರಿ. ಸಾಕ್ಷಿಯ ಮುಂದುವರೆದು ಆ ಸಮಯದಲ್ಲಿ ನಾವೆಲ್ಲರೂ ಕೂಡಿಯೆ ಇದ್ದೆವು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಮಾರಾಟವಾಗಿರುವು ಬಗ್ಗೆ ನನಗೆ ಮಾಹಿತಿ ಇಲ್ಲಾ. ಸದರಿ ಭಾಗವ್ವ ಇವರು ತಮ್ಮ ಆಸ್ತಿಗಳನ್ನು ವಿಲ್ ಮೂಲಕ 1ನೇ ಪ್ರತಿವಾದಿಗೆ ಕೊಟ್ಟಿರುವುದರಿಂದ ನಾನು 1 ನೇ ಪ್ರತಿವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ